ಗಲೀನಾ ದೇಮಿಕಿನಾ



ಮಾಷಳ ಹಾಸಿಗೆ



ಗಲೀನ ಲೇಬೆದೆವ

ಮಾಷಳ ಹಾಸಿಗೆ



ಮಾಷಳ ತಾಯಿ ಎಂದಿನಂತೆ ತನ್ನ ಮಗಳನ್ನು ಹಾಸಿಗೆಯ ಮೇಲೆ ಮಲಗಿಸಿದಳು. ತದನಂತರ ದೀಪವಾರಿಸಿ ತಾನು ನೆರೆಮನೆಯಾಕೆಯನ್ನು ಕಾಣಲು ಹೋದಳು.

ಮಾಷ ತನ್ನ ಹಾಸಿಗೆಯ ಮೇಲೆ ಹೊರಳಾಡಿದಳು. ಮಗ್ಗಲು ಬದಲಾಯಿಸಿದಳು. ಆದರೆ ಅವಳಿಗೆ ನಿದ್ರೆಯೇ ಬರಲಿಲ್ಲ. ಆಕೆಗೆ ಒಂದು ಬಾರಿ ಹಾಸಿಗೆ ಒರಟೆನಿಸಿತು. ಇನ್ನೊಂದು ಬಾರಿ ದಿಂಬು ಎತ್ತರವೆನಿಸಿತು. ಮಗದೊಂದು ಬಾರಿ ದಿಂಬು ತಗ್ಗೆನಿಸಿತು. ಮಾಷ ಕೋಪಗೊಂಡು ದಿಂಬನ್ನು ನುಲಿಚುತ್ತ, “ನೀನೆಂತ ಒರಟು ! ಬೊಜ್ಜು ! ಸುಮ್ಮನೆ ಉಬ್ಬಿ ಕೊಂಡಿದೀಯ !” ಎಂದಳು.

ಆಮೇಲೆ ದಿಂಬನ್ನು ಕಾಲಿನಿಂದ ತುಳಿದು ಕಂಬಳಿಯನ್ನು ನೆಲದ ಮೇಲೆ ಬಿಸಾಡಿ,

“ಹೋಗು ! ನೀನು ವಜನಾಗಿದೀಯ, ಚುಚ್ಚುತ್ತೀಯ,” ಎಂದು ಮಾಷ ಮಂಚದಿಂದಿಳಿದು ಕಾಲಿನಿಂದ ನೆಲವನ್ನೊಂದು ಬಾರಿ ಸಿಟ್ಟಿನಿಂದ ಒದ್ದಳು:

“ಈ ಹಾಸಿಗೆ ನನ್ನನ್ನು ಸಾಕುಮಾಡಿಬಿಡ್ತು ! ಮಲಗಿ ಮಲಗಿ ಬೇಜಾರಾಯ್ತು,” ಅನ್ನುತ್ತಾ ಅವಳು ಚಪ್ಪಲಿ ಹಾಕಿಕೊಂಡು ಸದ್ದು ಮಾಡದೆ ತನ್ನ ಕೋಣೆಯಿಂದಾಚೆಗೆ ಬಂದಳು. ನೋಡುತ್ತಾಳೆ ! ಮನೆಬಾಗಿಲಿಗೆ ಬೀಗ ಹಾಕಿಲ್ಲ. ಸ್ವಲ್ಪ ಹೊತ್ತು ನಿಂತಳು. ಅನುಮಾನಿಸಿದಳು. ಅತ್ತಿತ್ತ ನೋಡಿದಳು. ಕಿವಿಗೊಟ್ಟಳು.... ಯಾರೂ ಇಲ್ಲ ! ಮೆಲ್ಲನೆ ತೋಟಕ್ಕೆ ಹೋಗುವ ಮೆಟ್ಟಿಲ ಮೇಲಿನಿಂದ ಇಳಿದಳು.



"ಆಹಾ! ಏನು ಸೊಗಸು. ಈ ಹೊತ್ತಿನಲ್ಲಿ ಯಾಕಪ್ಪ ನಿದ್ದೆ ಮಾಡಬೇಕು?" ಅನ್ನುತ್ತಾ ಮಾಷ ಒಂದೇ ಕಾಲಿನಲ್ಲಿ ನೆಗೆದಳು.

ತೋಟದ ಹಾದೀಲಿ ಅವಳು ಓಡಿದಳು. ಆಗ ತನ್ನ ಗೂಡಿನಿಂದ ನಾಯಿಮರಿ ತ್ಯಾಫ್ಕ ಅಡ್ಡ ಬಂತು.

"ಬೌ! ಬೌ! ಯಾರದು?" ಎಂದಿತು ತ್ಯಾಫ್ಕ.

"ನಾನು. ಮಾಷ."

"ನೀನ್ಯಾಕೆ ಇನ್ನೂ ಮಲಗಿಲ್ಲ? ಈಗಾಗ್ಲೆ ಹೊತ್ತಾಗಿದೆ."

"ನನ್ನ ಹಾಸಿಗೆ ಚೆನ್ನಾಗಿಲ್ಲ. ಹಿತಕರವಾಗಿಲ್ಲ. ಅದರ ಮೇಲೆ ನಂಗೆ ಸಿಟ್ಟುಬಂತು. ಅದಕ್ಕೇ ನಾನಿನ್ನೂ ಮಲಗಿಲ್ಲ."

"ಭೇಷ್! ಒಳ್ಳೇ ಕೆಲ್ಸ ಮಾಡ್ದೆ. ನಿನ್ನ ಹಾಸಿಗೆಗಿಂತ ನನ್ನ ಗೂಡಿನಲ್ಲಿ ಮಲಗೋದೆ ಸೊಗಸು. ಗೋಣಿತೊಟ್ಟಿನ ಮೇಲೆ ಮುದುರಿಕೊಂಡು ಮಲಗಿದ್ರೆ ಎಂತೆಂಥ ಕನಸು ಬೀಳತ್ತೆ ಗೊತ್ತಾ? ಸರಿ. ಬಾ, ಇಲ್ಲಿ ತೂರು."

"ಆಹಾ! ಎಷ್ಟು ಚಂದ!" ಎಂದು ಮಾಷ ಹಿಗ್ಗಿದಳು.

ಮಂಡಿಯೂರಿ ಬಗ್ಗಿ ಅವಳು ನಾಯಿಮರಿಯ ಗೂಡಿನೊಳಕ್ಕೆ ತೂರಿದಳು. ಮುದುರಿಕೊಂಡು ಮಲಗಲು ಯತ್ನಿಸಿದಳು. ಆದರೆ ಅವಳಿಗೆ ಸರಿಯಾಗಲಿಲ್ಲ. ಅಲ್ಲಿ ಗಡುಸು, ಇಕ್ಕಟ್ಟು. ಆಗ ನಾಯಿಮರಿ ತ್ಯಾಫ್ಕ ತನ್ನ ಮೂತಿಯನ್ನು ಗೂಡಿನೊಳಕ್ಕಿಟ್ಟಿತು. ಬಾಯಲ್ಲಿ ಮೂಳೆಯನ್ನು ಕಚ್ಚಿಕೊಂಡಿತ್ತು.

"ನೋಡು. ನಿನಗೆ ಮೂಳೆಚೂರು ತಂದಿದ್ದೀನಿ. ಇದನ್ನು ಕಚ್ಚಿಕೊಂಡು ಮಲಗಿದರೆ ಸುಖ ನಿದ್ರೆ ಬರುತ್ತೆ."

"ನಿಂಗೆ ವಂದನೆಗಳು, ತ್ಯಾಫ್ಕ," ಎಂದು ಹೇಳಿ ಮಾಷ ಗೂಡಿನಿಂದ ಹೊರಕ್ಕೆ ಬಂದಳು. "ನಿನ್ನ ಮನೆ ಚೆನ್ನಾಗಿದೆ. ಆದರೆ ಅದರಲ್ಲಿ ಮಲಗಲು ನನಗೆ ಆಸೆ ಇಲ್ಲ."

"ಆಹಾ! ನೀನು ಬಹಳ ಕಿರಿ ಕಿರಿ ಮಾಡ್ತೀಯ. ನಿಂಗೋ, ಎಲ್ಲವೂ ಹೇಳಿ ಮಾಡಿಸಿದ ಹಾಗಿರ್ಬೇಕು," ಎಂದು ಗೊಣಗಿ ತ್ಯಾಫ್ಕ ತನ್ನ ಮುನಿಸು ತೋರಿಸಿತು.







ತ್ಯಾಫ್ಕ ತನ್ನ ಪಾಡಿಗೆ ತಾನು ಗೂಡಿಗೆ ತೂರಿತು. ಪಟ್ಟೆಕೋಳಿ ಅವಳಿಗೋಸ್ಕರ ರಂಗುರಂಗಾದ ಮೊಟ್ಟೆ ಇಟ್ಟಿದೆಯೋ ಇಲ್ಲವೋ ಅಂತ ನೋಡಲು ಮಾಷ ಕೋಳಿಗೂಡಿನ ಕಡೆಗೆ ಓಡಿದಳು. ಮಾಷ ಇನ್ನೂ ಕೋಳಿಗುಡಿಸಲಿನ ಒಳಕ್ಕೆ ಹೋಗೇ ಇಲ್ಲ ಆಗಲೇ ಹುಂಜ ಒಂದು ಸಾರಿ ಮೈಕೊಡವಿ ತನ್ನ ಕತ್ತನ್ನು ಎಲ್ಲ ಕಡೆಗೂ ಒಂದು ಸಾರಿ ತಿರುಗಿಸಿ ನೋಡಿತು.

"ನಿಂಗೇನು ಬೇಕು?" ಎಂದು ಹುಂಜ ಪೇತ್ಕ ಗಂಭೀರವಾಗಿ ಕೇಳಿತು.

"ನೋಡು, ಪೇತ್ಕ, ಪಟ್ಟೆ ಕೋಳಿ ನನಗೋಸ್ಕರ ಬಣ್ಣಬಣ್ಣದ ಮೊಟ್ಟೆ ಇಟ್ಟಿದೆಯೋ ಇಲ್ವೋ ಅಂತ ನೋಡಲು ಬಂದೆ."

"ಅಲ್ಲಾ! ನೀನೆಂತ ಅವಸರದೋಳು. ಪಟ್ಟೆ ಕೋಳಿ ದಿನಾಲು ಬಿಳೀ ಮೊಟ್ಟೆಗಳ್ನೇ ಇಡ್ತಾ ಇದೆ. ಬಣ್ಣಬಣ್ಣದ್ದು ಇಡೋದು ಬಲು ಅಪರೂಪ. ಮಲಗೋದು ಬಿಟ್ಟು ಇಲ್ಲಿಗೆ ಬಂದಿದೀಯ," ಎಂದು ಪೇತ್ಕ ಮಾಷಳನ್ನು ಗದರಿಸಿತು.

"ನಂಗೆ ಮಲಗಕ್ಕೆ ಆಗ್ತಾ ಇಲ್ಲ," ಅಂದಳು ಮಾಷ.

"ಅದ್ಯಾಕೆ?"

"ನನ್ನ ಹಾಸಿಗೆಯ ಮೇಲೆ ನನಗೆ ಸಿಟ್ಟು ಬಂದಿದೆ. ಅದು ಹಿತವಾಗಿಲ್ಲ."

"ಹೌದಾ! ಇದ್ದರೂ ಇರಬಹುದು," ಎಂದು ಹುಂಜ ತನ್ನ ಸಮ್ಮತಿ ಸೂಚಿಸಿ, "ಇಲ್ಲಿ ಬಾ. ಒಬ್ಬರಿಗೊಬ್ಬರು ಒತ್ತಿಕೊಂಡು, ರೆಕ್ಕೆಗಳನ್ನು ಹರಡಿಕೊಂಡು ಮಲಗಿದ್ರೆ ಬಹಳ ಸೊಗಸಾಗಿರುತ್ತೆ. ಏನು, ಚೆಂದಾ ಅಂತೀಯ? ಹತ್ತು ನಮ್ಮ ಚಪ್ಪರದ ಮೇಲಕ್ಕೆ. ಈ ಅಡ್ಡ ಕಂಬಿಯ ಮೇಲಕ್ಕೆ ಬಾ," ಎಂದಿತು.

ಮಾಷ ಅತಿ ಪ್ರಯಾಸದಿಂದ ಕಂಬಿಯ ಮೇಲಕ್ಕೆ ಹತ್ತಿದಳು. ಕಾಲುಗಳನ್ನು ಮುದುರಿಕೊಂಡು, ಮುಖವನ್ನು ತನ್ನ ಕೈಗಳ ಮಧ್ಯೆ ಇಟ್ಟು ಕೂತಳು. ಒಂದು ಪಕ್ಕದಲ್ಲಿ ಕೋಳಿ ಒರಗಿಕೊಂಡು ಕಾವು ಕೊಡ್ತಾ ಇದೆ. ಇನ್ನೊಂದು ಕಡೆ ಹುಂಜ. ನಿಜವಾಗಿಯೂ ಚೆನ್ನಾಗಿದೆ. ಅಲ್ಲದೆ ಬೆಚ್ಚಗಿದೆ. ಮಾಷ ಹಾಗೆ ಸ್ವಲ್ಪ ತೂಕಡಿಸಿದಳು. ಕಂಬಿಯ ಮೇಲಿನಿಂದ ತೊಪ್ಪನೆ ಕೆಳಗೆ ಬಿದ್ದಳು.





ಮಾಷ ಎದ್ದು ಕೋಳಿಗುಡಿಸಲಿನಿಂದ ಓಟ ಕಿತ್ತಳು. ಬಂದು ಮನೆ ಹೊಸ್ತಿಲ ಮೇಲೆ ಕುಳಿತುಕೊಂಡಳು. ರೆಪ್ಪೆ ಮಿಟುಕಿಸುವುದರೊಳಗಾಗಿ ಅವಳ ಮುಂದೆ ಎಂಥದೋ ಹಕ್ಕಿ ಹಾರಿಬಂದು ಸೀದಾ ಅವಳ ಮಂಡಿಯ ಮೇಲೆ ಕುಳಿತು ಕೊಂಡಿತು. ಮಾಷ ಅದರ ಕಡೆಗೆ ನೋಡ್ತಾಳೆ. ಅದೆಂಥದೋ ವಿಚಿತ್ರ ಹಕ್ಕಿ.

"ನಮಸ್ಕಾರ. ಯಾರು ನೀವು?" ಎಂದಳು ಮಾಷ.

"ನಾನು ಬಾವಲಿ. ಹಗಲು ಹೊತ್ತು ನಿಮ್ಮನೆಯ ಮೇಲಟ್ಟದಲ್ಲಿ ಮಲಗ್ತೀನಿ. ರಾತ್ರಿ ಹೊತ್ತು ಹಾರಾಡ್ತೀನಿ. ಅದಿರ್ಲಿ, ನೀನ್ಯಾಕೆ ಇನ್ನೂ ಮಲಗಿಲ್ಲ?" ಎಂದು ಕೇಳಿತು ಬಾವಲಿ.

"ನನ್ನ ಹಾಸಿಗೆ ಚೆನ್ನಾಗಿಲ್ಲ."

"ಹೌದಾ! ನಿನ್ನ ನೋಡಿದರೆ ನಿಜವಾಗಿಯೂ ನನಗೆ ಕನಿಕರ ಹುಟ್ಟುತ್ತೆ." ಹೀಗೆಂದು ಬಾವಲಿ ನಿಟ್ಟುಸಿರು ಬಿಟ್ಟಿತು. "ಬೇಕೇನು? ನಾನು ನಿನಗೆ ಸಹಾಯ ಮಾಡ್ತೀನಿ."

"ಓ! ಆಗಲಿ. ಮಾಡು."

"ಹಾಗಾದ್ರೆ, ನನ್ನ ಜೊತೇಲಿ ಮೇಲಟ್ಟಕ್ಕೆ ಬಾ."



ಬಾವಲಿ ತನ್ನ ರೆಕ್ಕೆಯನ್ನು ಬಡಿದುಕೊಂಡು ಮನೆ ಚಾವಣಿಯ ಕಿಟಕಿಯ ಕಡೆಗೆ ಹಾರಿತು. ಮಾಷ ಒಂದು ಒರಟಾದ ಮರದ ಮೆಟ್ಟಲಿನ ಸಹಾಯದಿಂದ ಮೇಲಟ್ಟಕ್ಕೆ ಹತ್ತಿದಳು.

"ಇದು ನನ್ನ ಮಲಗುವ ಕೋಣೆ," ಎಂದಿತು ಬಾವಲಿ.

"ನಿಮ್ಮ ಮಂಚ ಎಲ್ಲಿ?" ಎಂದು ಪ್ರಶ್ನಿಸಿದಳು ಮಾಷ.

"ಹಾ ! ಅದೇ ಇರೋದು ! ನಾನು ಯಾವ ರೀತಿಯ ಮಂಚವೂ ಇಲ್ಲದೆ ಮಲಗ್ತೀನಿ. ಮೇಲ್ಚಾವಣಿ ತಲುಪೋದೇ ತಡ ಪಂಜಗಳಿಂದ ಈ ಮೊಳೆಗೆ ಕಚ್ಚಿಕೊಂಡು ತಲೆ ಕೆಳಗೆ ನೇತಾಡೋ ಹಾಗೆ ಮಾಡಿಕೊಂಡುಬಿಡೋದಷ್ಟೆ. ಬಾ ಮೇಲಕ್ಕೆ, ನನ್ನ ಹತ್ತಿರ. ನನ್ನ ಪ್ರೀತಿಯ ಮೊಳೆಯನ್ನ ಇವತ್ತು ನಿಂಗೆ ಬಿಟ್ಟುಕೊಟ್ಟುಬಿಡ್ತೀನಿ," ಎಂದಿತು ಬಾವಲಿ.

ಮಾಷ ಈಗ ತಾನೆ ಕೋಳಿಗುಡಿಸಲಿನಲ್ಲಿ ಅಡ್ಡ ಕಂಬಿಯ ಮೇಲಿನಿಂದ ಬಿದ್ದದ್ದನ್ನ ನೆನಸಿಕೊಂಡಳು. ತರಚಿಕೊಂಡಿದ್ದ ಮಂಡಿಯನ್ನು ಮತ್ತೊಮ್ಮೆ ಮುಟ್ಟಿ ನೋಡಿಕೊಂಡಳು.

"ಅಲ್ಲಾ ! ನಾನಲ್ಲಿ ಹೇಗೆ ಮಲಗೋದು ? ಅದೂ, ತಲೆ ಕೆಳಗೆ ಮಾಡಿಕೊಂಡು. ಬೇಡಪ್ಪಾ ಬಿದ್'ಬಿಡ್ತೀನಿ. ಇದೆಲ್ಲಾ ಆಗೋಲ್ಲ. ಇಲ್ಲೂ ಅನುಕೂಲವಿಲ್ಲ...." ಅಂತ ಯೋಚಿಸಿದಳು.

"ನೀನೆಲ್ಲಿದೀಯ? ಬಾ, ನನ್ನ ಹತ್ತಿರ," ಅಂತ ಬಾವಲಿ ಕೂಗಿತು.

ಮಾಷ ಬಾವಲಿಯ ಕೂಗನ್ನು ಉತ್ತರಿಸದೆ ಅಲುಗಾಡುತ್ತಿದ್ದ ಮೆಟ್ಟಲಿನ ಮೇಲೆ ಮೆಲ್ಲನೆ ಇಳಿದಳು. ಬೇಲಿ ಸಂದಿಯಲ್ಲಿ ನುಗ್ಗಿ ತೋಟದಿಂದ ಹೊರಬಂದು ಕೊಳದ ಕಡೆಗೆ ನಡೆದಳು. ಕಪ್ಪೆಗಳು ಅವಳ ಹೆಜ್ಜೆಗಳ ಸಪ್ಪಳ ಕೇಳಿ ಹೆದರಿ ವಟಗುಟ್ಟುವುದನ್ನು ನಿಲ್ಲಿಸಿ ಬುಳುಂ ಅಂತ ನೀರಿನೊಳಕ್ಕೆ ಧುಮುಕಿದವು. ಮುದಿ ಬಕಪಕ್ಷಿ ಬೆದರಿ ರೆಕ್ಕೆ ಬಡಿಯಿತು. ಆಮೇಲೆ ಮಾಷಳನ್ನು ನೋಡಿ ಸುಮ್ಮನಾಯಿತು.

"ಇದೇನು? ಹೀಗೆ ಅಲೀತಿದ್ದೀಯ? ನನ್ನ ಪಾಲಿನ ಕಪ್ಪೆಗಳನ್ನೆಲ್ಲಾ ಹೆದರಿಸಿಬಿಟ್ಟೆಯಲ್ಲಾ?" ಎಂದಿತು ಬಕಪಕ್ಷಿ.

"ನಂಗೆ ಮಲಗಲು ಇಷ್ಟವಿಲ್ಲ," ಅಂದಳು ಮಾಷ.

"ಹ, ಹ, ಹ!" ಅಂತ ಚಳಿ ಬಂದವರ ಹಾಗೆ ಬಕಪಕ್ಷಿ ಕೆಮ್ಮಿತು. "ನಾನಂದುಕೊಂಡಿದ್ದೆ, ನಾನೋ ಮುದುಕಿ. ವಯಸ್ಸಾಯಿತು ನಂಗೆ. ಸಂಧಿವಾತವಾದ್ದರಿಂದ ನನಗೆ ಮಾತ್ರ ನಿದ್ರೆ ಬರೋಲ್ಲ ಅಂತ ತಿಳ್ದಿದ್ದೆ. ಅಲ್ಲಾ, ನಿಂಗೇನಾಗಿದೆ? ಏನು ನಿನ್ನ ಸಂಕಟ?" ಅಂದಿತು.

"ನಂಗೇನಾಗಿಲ್ಲ," ಮಾಷ ತಬ್ಬಿಬ್ಬಾಗಿ, "ಪ್ರತೀ ದಿನ ಮಲಗಿ ಮಲಗಿ ಬೇಜಾರಾಗಿದೆ," ಅಂದಳು.



"ನಿಜ. ನಿಜ. ಬೇಸರ ಆಗುತ್ತೆ. ನಾನು ನನ್ನ ಸ್ವಂತ ಅನುಭವದಿಂದ ಹೇಳ್ತಾ ಇದೀನಿ. ಸರಿ, ನೀನು ಈ ಜೊಂಡಿ ಕೊಳಕ್ಕೆ ಬಾ. ನಾವಿಬ್ರೂ ಸ್ನೇಹಿತರಾಗೋಣ. ನಾನು ನಿನಗೆ ತಿನ್ನಲು ಕಪ್ಪೇಮರಿ ಕೊಡ್ತೀನಿ. ಆಮೇಲೆ ಮೆತುವಾದ ಮಣ್ಣಿನಲ್ಲಿ ಪಕ್ಕಪಕ್ಕದಲ್ಲಿ ಒಂದೇ ಕಾಲಿನಲ್ಲಿ ನಿಲ್ಲೋಣ. ನಾನು ನನ್ನ ರೆಕ್ಕೆಯಿಂದ ನಿನಗೆ ರಕ್ಷಣೆ ಕೊಡ್ತೇನೆ," ಅಂದಿತು ಬಕಪಕ್ಷಿ.

"ನಂಗೆ ಕಪ್ಪೆ ಕಂಡ್ರೆ ಹೆದರಿಕೆ," ಮಾಷ ರೋಧನ ಸ್ವರದಲ್ಲಿ ಹೇಳಿದಳು. "ಅಲ್ಲದೆ ಕೆಸರು, ರಾಡಿನೀರು ! ಇಲ್ಲಪ್ಪಾ, ನಾನು ನಿನ್ನ ಮನೇಲಿ ಮಲಗೋಲ್ಲ," ಅಂದಳು ಮಾಷ.

"ಅಯ್ಯೋ ! ನೀನೆಂಥ ಅಳುಮೋರೆ," ಅಂದು ಬಕಪಕ್ಷಿ ಮಾಷಳ ಮೇಲೆ ಕೋಪಿಸಿಕೊಂಡು "ಹೊರಡಿಲ್ಲಿಂದ, ಹುಂ, ಬೇಗನೆ ! ನೀನಿಲ್ದೇನೆ ನನಗಿಲ್ಲಿ ತೇವ ಬೇಕಾದಷ್ಟಿದೆ," ಎಂದು ಕಿರುಚಿತು.

ಮಾಷ ಸಪ್ಪೇ ಮುಖ ಹಾಕಿಕೊಂಡು ಹಿಂತಿರುಗಿದಳು.

"ಅಬ್ಬಬ್ಬಾ ! ಕಪ್ಪೆಗಳಿರುವ ಆ ಕೊಳದಲ್ಲಿ ಮಲಗೋದು ಹೇಗಪ್ಪ ? ತೇವ. ಚಳಿ ಬೇರೆ," ಅಂತ ಮಾಷ ಮನಸ್ಸಿನಲ್ಲಯೇ ಮರುಗಿದಳು. "ಈಗಲೇ ಹೋಗಿ ಹಾಸಿಗೆಯ ಮೇಲೆ ಮಲಗಿ, ಬೆಚ್ಚಗಿರೋ ಕಂಬಳಿ ಹೊದ್ದುಕೊಂಡರೆ ಹೇಗಿರುತ್ತೆ !... ಕಂಬಳಿಯೇನೂ ಕಚ್ಚೊಲ್ಲ. ಅದು ಇನ್ನೂ ಒಳ್ಳೇದಲ್ವೆ. ಜತೆಗೆ ಮೆತ್ತಗಿರೊ ದಿಂಬು."



ಹೀಗೆನ್ನುತ್ತಾ ಮಾಷ ಮನೆಗೆ ಹಿಂತಿರುಗಿದಳು.

ಮೆಟ್ಟಂಗಾಲಿನಲ್ಲಿ ಮೆಲ್ಲನೆ ಹೆಜ್ಜೆಯನ್ನಿಡುತ್ತಾ ಮಾಷ ತನ್ನ ಮಲಗುವ ಕೋಣೆಗೆ ಹೋದಳು. ನೆಲದಿಂದ ಕಂಬಳಿಯನ್ನು ಎತ್ತಿ ದಿಂಬನ್ನು ಅದರ ಸ್ಥಾನದಲ್ಲಿರಿಸಿ, ತನ್ನ ಮೃದುವಾದ ಹಾಸಿಗೆಯಲ್ಲಿ ಮಲಗಿ ಕಾಲು ನೀಚಿದಳು.

ಹಾಗೆಯೇ ಆಕಳಿಸುತ್ತಾ, "ನನ್ನ ಹಾಸಿಗೆಯಂಥಾ ಹಾಸಿಗೆ ಪ್ರಪಂಚದಲ್ಲೇ ಯಾರ ಹತ್ರಾನೂ ಇಲ್ಲ," ಅಂದಳು ಮಾಷ.





ಅನುವಾದ : ಉಮಾಪತಿ

ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾಗಿದೆ

ಪ್ರಗತಿ ಪ್ರಕಾಶನ
ಮಾಸ್ಕೋ



Г. Лебедева

КАК МАША ПОССОРИЛАСЬ С ПОДУШКОЙ

на языке каннада

Л $\frac{70801\text{-}416}{014(01)\text{-}78}$ 724-78